# <u>ಯಾಕೆ ಕಕುಲಾತಿ ಪಡುವೆ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 474.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 445.
3. **Note:** Lyrics given here are as per Ref. 1. Lyrics given in Ref. 2 are slightly different which are given in yellow highlights.
4. **Note:** Singer has followed these lyrics as in Ref. 2.

ರಾಗ: ಕಲ್ಯಾಣಿ ತಾಳ: ಅಟ

ಯಾಕೆ ಕಕುಲಾತಿ ಪಡುವೆ ಎಲೆ ಮರುಳೆ ॥ ಪ ॥

ಲೋಕ ಮೂರನು ಆಳ್ವ ಶ್ರೀನಿವಾಸನು ನಮ್ಮ
ಸಾಕಲಾರದೆ ಬಿಡುವನೇ ಮರುಳೆ ॥ ಅಪ ॥

ಕಲ್ಲುಪಡೆಯಲ್ಲಿ ಹುಟ್ಟಿರುವ ಮಂಡೂಕಗೆ
ಅಲ್ಲಿ (ತಂದಿಡುವರಾರೋ) (ತಂದಿಡುವರ್ಯಾರೋ)
ಎಲ್ಲವನು ತೊರೆದಿರುವ ಅರಣ್ಯ ವಾಸಿಯನು
ಅಲ್ಲೆ ಸಲಹದೆ ಬಿಡುವನೇ ಮರುಳೆ ॥ 1 ॥

ಅಡವಿಯೊಳು ಹುಟ್ಟುವ ಮೃಗ ಜಾತಿಗಳಿಗೆಲ್ಲ
ಬಿಡದೆ (ತಂದಿಡುವರಾರೋ) (ತಂದಿಡುವರ್ಯಾರೋ)
ಗಿಡದಿಂದ ಗಿಡಗಳಿಗೆ ಹಾರುವ ಪಕ್ಷಿಗೆ
ಪಡಿಯನಳೆಯದೆ ಬಿಡುವನೇ ಮರುಳೆ ॥ 2 ॥

ಎಂಭತ್ತು ನಾಲ್ಕು ಲಕ್ಷ ಜೀವ ರಾಶಿಗಳನ್ನು
ಇಂಬಾಗಿ ಸಲಹುತಿಹನು ನಂಬು
ಶ್ರೀ ಪುರಂದರ ವಿಠ್ಠಲನ ಚರಣವನು
ನಂಬಿದರೆ ಸಲಹದಿಹನೇ ಮರುಳೆ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಕಕುಲಾತಿ** – ಕಕ್ಕುಲತೆ, ಪ್ರೀತಿಯಿಂದ ಒದಗುವ ಕಾತರ.

**ಪಡೆ** – ಪೊಟರೆ, ಡೊಗರು.

**ಮಂಡೂಕ** = ಕಪ್ಪೆ

**ಪಡಿಯನು** – ನಿರ್ದಿಷ್ಟವಾದ ಆಹಾರವನ್ನು.

**ಇಂಬಾಗಿ** – ಸೊಗಸಾಗಿ, ಚೆನ್ನಾಗಿ.

**Classification:** Keerthane
**Ankita:** sri purandara vittala
**Location:** NA
**Category:** Bhakti
**Sub-Category:** Bhakti, loka, srinivasa, kallu, kappe, kaadu, prani, mara, pakshi, jiva,
**Pravachana:** NA
**Explanation:** NA